■ ಹನಿ



## ‘ವೇಗದೂತ’ನಿಗೆ ಪಟ್ಟ

ದಕ್ಷಿಣ ಆಫ್ರಿಕಾ ಟೆಸ್ಟ್ ಕ್ರಿಕೆಟ್ ತಂಡದ ನಾಯಕನಾಗಿ ಭಾರತೀಯ ಮೂಲದ ಹಾಶಿಂ ಆಮ್ಲ ಆಯ್ಕೆಯಾಗಿ ಹೊಸ ದಾಖಲೆ ಬರೆದಿದ್ದಾನೆ. ವರ್ಣಭೇದ ನೀತಿಯ ಕುಲುಮೆಯಲ್ಲಿ ಬೆಂದ ದಕ್ಷಿಣ ಆಫ್ರಿಕಾದಲ್ಲಿ ಕರಿಯರನ್ನೂ ಸೇರಿಸಿಕೊಂಡು ಕಟ್ಟಿದ ಕ್ರಿಕೆಟ್ ತಂಡಕ್ಕೆ ಈಗ ಭಾರತೀಯ ಮೂಲದ ಹಾಶಿಂ ಆಮ್ಲ ನಾಯಕನಾಗಿರುವುದು ಇನ್ನೊಂದು ಹೆಗ್ಗಳಿಕೆ. ತನ್ನ ದೈತ್ಯ ಪ್ರತಿಭೆಯಿಂದಲೇ ನಾಯಕ ಪಟ್ಟಕ್ಕೆ ಲಗ್ಗೆ ಹಾಕಿರುವ ಆಮ್ಲ, 31ರ ಹರೆಯದಲ್ಲಿ (ಬರ್ತ್‌ಡೇ 31-3-83) ಈ ಸಾಧನೆ ಮಾಡಿದ ‘ವೇಗ’ದೂತ. ವೇಗ ಆತನ ಕ್ರಿಕೆಟ್ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಕೇವಲ 57 ಒನ್‌ಡೇ ಇನಿಂಗ್ಸ್‌ಗಳಲ್ಲಿ 3000 ರನ್ ಹೊಡೆದದ್ದು, ಆ ಬಳಿಕ ಅತ್ಯಂತ ವೇಗವಾಗಿ 4000 ರನ್ ಗಳಿಸಿದ್ದು– ಎರಡೂ ವೇಗದ ದಾಖಲೆಗಳು. ಇದಕ್ಕೂ ಮುನ್ನ ಈ ವೇಗದ ದಾಖಲೆ ವಿವಿಯನ್ ರಿಚರ್ಡ್ಸ್ ಹೆಸರಲ್ಲಿತ್ತು. ಕೇವಲ 57 ಏಕದಿನ ಇನಿಂಗ್ಸ್‌ಗಳಲ್ಲಿ ಒಟ್ಟು ಹತ್ತು ಶತಕಗಳನ್ನು ದಾಖಲಿಸಿರುವ ಆಮ್ಲ, ನಮ್ಮ ವಿರಾಟ್ ಕೊಹ್ಲಿಯ ವೇಗದ ಶತಕಗಳ ದಾಖಲೆಯನ್ನೂ ಅಳಿಸಿದ್ದಾನೆ.

ದಾಖಲೆಗಳು ಆಮ್ಲಗೆ ಹೊಸತಲ್ಲ. 2012ರಲ್ಲಿ ಇಂಗ್ಲೆಂಡ್ ವಿರುದ್ಧ ಅಜೇಯ 311 ರನ್‌ಗಳನ್ನು ಹೊಡೆದು ದಕ್ಷಿಣ ಆಫ್ರಿಕಾ ಪರ ಟೆಸ್ಟ್‌ನಲ್ಲಿ ತ್ರಿಶತಕ ದಾಖಲಿಸಿದ ಮೊದಲ ಆಟಗಾರನೀತ. ಹಾಗೆಯೇ 21ರ ಹರೆಯದಲ್ಲೇ ಕ್ವಾಝುಲು– ನಟಾಲ್ ತಂಡದ ನಾಯಕತ್ವ ವಹಿಸಿದ್ದೂ ದಾಖಲೆಯೇ. ಒಂದೇ ಸೀಸನ್‌ನಲ್ಲಿ (2010) ಏಕದಿನ ಮತ್ತು ಟೆಸ್ಟ್ ಎರಡೂ ಕಡೆ ತಲಾ 1000 ರನ್‌ಗಳನ್ನು ಹೊಡೆದಿರುವ ವಿಶ್ವದ ಏಕೈಕ ಆಟಗಾರನೀತ.

ಹಾಶಿಂ ಆಮ್ಲ ಹೆತ್ತವರು ಭಾರತದ ಗುಜರಾತಿನವರು. ವೈಯಕ್ತಿಕವಾಗಿ ಅತ್ಯಂತ ಧರ್ಮಭೀರುವಾಗಿರುವ ಆಮ್ಲ, ತನ್ನ ಉದ್ದನೆಯ ಗಡ್ಡದಿಂದಲೇ ಮೈದಾನದಲ್ಲಿ ಗಮನ ಸೆಳೆಯುತ್ತಾನೆ. ದಕ್ಷಿಣ ಆಫ್ರಿಕಾ ತಂಡದ ಪ್ರಾಯೋಜಕತ್ವ ವಹಿಸಿರುವ ಬೀರ್ ಕಂಪೆನಿಯ ಲೋಗೋ ಹೊತ್ತ ಟೀಶರ್ಟ್ ಧರಿಸಲು ನಿರಾಕರಿಸಿದ್ದ ಆಮ್ಲ ಆ ಹಿನ್ನೆಲೆಯಲ್ಲೇ ನಾಯಕತ್ವ ವಂಚಿತನಾಗಬಹುದು ಎಂಬ ವರದಿಗಳಿದ್ದವು. ಆದರೆ ಅದೀಗ ಸುಳ್ಳಾಗಿದೆ. ಈ ಬಲಗೈ ಬ್ಯಾಟ್ಸ್‌ಮನ್ ಅಗತ್ಯ ಬಿದ್ದರೆ ಮೀಡಿಯಂ ಪೇಸ್ ಬೌಲಿಂಗ್ ಕೂಡಾ ಮಾಡಬಲ್ಲ. 2006ರಲ್ಲಿ ‘ಟೆನ್ ಸ್ಪೋರ್ಟ್ಸ್’ ಪರವಾಗಿ ಕಾಮೆಂಟ್ರಿ ಮಾಡುತ್ತಿದ್ದ ಡೀನ್ ಜೋನ್ಸ್, ಈತನ ವೇಗದ ಬೌಲಿಂಗ್‌ನಲ್ಲಿ ವಿಕೆಟ್ ಹಾರಿದ್ದನ್ನು ನೋಡಿ, ‘ಭಯೋತ್ಪಾದಕ ಇನ್ನೊಂದು ವಿಕೆಟ್ ಉರುಳಿಸಿದ’ ಎಂದು ಕಾಮೆಂಟ್ರಿ ನೀಡಿದ್ದು ದೊಡ್ಡ ಗದ್ದಲವಾಗಿ, ಜೋನ್ಸ್ ಕೆಲಸ ಕಳೆದುಕೊಂಡ. ಬಳಿಕ ಅದಕ್ಕಾಗಿ ಕ್ಷಮೆ ಯಾಚಿಸಿದಾಗ, ಆಮ್ಲ ನಗುತ್ತಲೇ ‘ಇಟ್ಸ್ ಆಲ್‌ರೈಟ್’ ಎಂದಿದ್ದ! ಮುಂದಿನ ತಿಂಗಳು ಶ್ರೀಲಂಕಾಗೆ ತೆರಳಲಿರುವ ದಕ್ಷಿಣ ಆಫ್ರಿಕಾ ತಂಡದಲ್ಲಿ ಈ ಗಡ್ಡಧಾರಿಯ ಮ್ಯಾಜಿಕ್ ಹೇಗೆ ನಡೆಯುತ್ತದೆಯೋ ಕಾದು ನೋಡಬೇಕು.



## ಒಲಿವರ್ ಸ್ಟೋನ್ ಸಿನಿಮಾ

ಮಿತ್ರದೇಶಗಳ ಮೇಲೆ ಅಮೆರಿಕ ರಹಸ್ಯ ಕಣ್ಗಾವಲು ನಡೆಸುತ್ತಿದ್ದುದಕ್ಕೆ ಸಂಬಂಧಿಸಿ ಮಿಲಿಟರಿ ರಹಸ್ಯದ ಸರಣಿ ಸಾಕ್ಷ್ಯಗಳನ್ನು ಬಿಡುಗಡೆ ಮಾಡಿ ಅಧ್ಯಕ್ಷ ಬರಾಕ್ ಒಬಾಮಾನ ನಿದ್ದೆಗೆಡಿಸಿದ, ಎಡ್ವರ್ಡ್ ಸ್ನೋಡೆನ್ ಸದ್ಯಕ್ಕೆ ರಶ್ಯಾದಲ್ಲಿ ರಾಜಕೀಯ ಆಶ್ರಯ ಪಡೆದಿದ್ದಾನೆ. ಆತನನ್ನು ಅಮೆರಿಕಕ್ಕೆ ಕರೆಸಿ 30 ವರ್ಷಗಳ ಕಾಲ ಜೈಲುಶಿಕ್ಷೆಗೆ ನೂಕಲು ಒಬಾಮಾ ಸರಕಾರ ಕಾಯುತ್ತಿದೆ. ಈ ಮಧ್ಯೆ ಸ್ನೋಡೆನ್ ಬಗ್ಗೆ ಹೊಸ ಸಿನಿಮಾ ಮಾಡುವುದಾಗಿ ಅಮೆರಿಕದ ಪ್ರಖ್ಯಾತ ಸಿನಿಮಾ ನಿರ್ದೇಶಕ ವಿಲಿಯಂ ಒಲಿವರ್ ಸ್ಟೋನ್ ಪ್ರಕಟಿಸಿದ್ದಾನೆ.

ಒಲಿವರ್ ಸ್ಟೋನ್ 80-90ರ ದಶಕದಲ್ಲಿ ತೆರೆಗೆ ತಂದ ಯುದ್ಧಾಸಕ್ತ ಸಿನಿಮಾಗಳು ಹಾಲಿವುಡ್‌ನಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿದ್ದವು. ಜೆಎಫ್‌ಕೆ, ನ್ಯಾಚುರಲ್ ಬಾರ್ನ್ ಕಿಲ್ಲರ್ಸ್, ನಿಕ್ಸನ್ ಮುಂತಾದ ಆತನ ಚಿತ್ರಗಳು ರಾಜಕೀಯ ಥ್ರಿಲ್ಲರ್‌ಗಳೆಂದೇ ಖ್ಯಾತಿ ಪಡೆದವು. ಮಿಡ್‌ನೈಟ್ ಎಕ್ಸ್‌ಪ್ರೆಸ್, ಪ್ಲಟೂನ್ ಮತ್ತು ಬಾರ್ನ್ ಆನ್ ದಿ ಫೋರ್ತ್ ಜುಲೈ ಎಂಬ ಮೂರು ಸಿನಿಮಾಗಳಿಗೆ ಆಸ್ಕರ್ (ಅಕಾಡೆಮಿ) ಪ್ರಶಸ್ತಿಗಳನ್ನೂ ಗೆದ್ದುಕೊಂಡ ಒಲಿವರ್ ಸ್ಟೋನ್, ಇದೀಗ ಕೈಗೆತ್ತಿಕೊಂಡಿರುವ ಹೊಸ ಸಿನಿಮಾ ಜಗತ್ತಿನಾದ್ಯಂತ ಕುತೂಹಲ ಕೆರಳಿಸಿದೆ. ನಿರ್ಮಾಪಕ, ಚಿತ್ರಕಥೆಗಾರ ಮತ್ತು ಯುದ್ಧವೀರನೂ ಆಗಿರುವ ಸ್ಟೋನ್, ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕದ ಸೈನಿಕನಾಗಿ ಭಾಗವಹಿಸಿದ್ದಾತ. ಎಡಪಂಥದ ಒಲವು ಹೊಂದಿರುವ ಸ್ಟೋನ್, ಈಗಾಗಲೆ ಪತ್ರಕರ್ತ ಲೂಕ್ ಹಾರ್ಡಿಂಗ್ ಬರೆದ ‘ಸ್ನೋಡನ್ ಫೈಲ್ಸ್’ ಪುಸ್ತಕದ ಹಕ್ಕುಗಳನ್ನು ಖರೀದಿಸಿಯಾಗಿದೆ. ಹೊಸ ಸಿನಿಮಾ ನಿರ್ಮಾಣದಲ್ಲಿ ಗಾರ್ಡಿಯನ್ ಪತ್ರಿಕೆಯೂ ನೆರವಾಗುತ್ತಿರುವುದು ಕುತೂಹಲವನ್ನು ಇನ್ನಷ್ಟು ಹೆಚ್ಚಿಸಿದೆ. ●

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65